ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಕೃಷ್ಣನಿಗೆ ನಿಜಕ್ಕೂ ಹದಿನಾರು ಸಾವಿರ 'ಹೆಂಡತಿ'ಯರು ಇದ್ದರೆ?



ಪಶುಪತಿ ಎಂದರೆ ಪಶುವಿನ ಗಂಡನಲ್ಲ, ರಕ್ಷಕ. ಕೃಷ್ಣ ಗೋಪಿಯರ ರಕ್ಷಕ; ತತ್ಕಾರಣ ಅವರ ಪ್ರೀತಿಪಾತ್ರ.

ಮಲ್ಲಿಕಾರ್ಜುನ, ಸುರಧೇನುಪುರ

ಮಹಿಳಾ ದಿನಾಚರಣೆಗೂ, ಪುರುಷರ ದಿನಾಚರಣೆಗೂ ಎಂಟು ತಿಂಗಳ ಅಂತರ ಏಕೆ?

ಅದು ಸರಿಯಾಗಿ 4x4x4x4=256 ದಿನಗಳು. 4 ನಿಟ್ಟಿನಲ್ಲೂ ಪುರುಷ ಸ್ತ್ರೀಯ ಬೌಂಡರಿಯಿಂದ ಹೊರಗೆಂಬ ಸೂಚನೆ.

ಜೀವಿ, ಗೊಂಡೇದಹಳ್ಳಿ

ಮಾಫಿಯಾಕ್ಕೂ ಮೇನಿಯಾಕ್ಕೂ ಇರುವ ವ್ಯತ್ಯಾಸವೇನು?

ಮಾಫಿಯಾ ಕೀಳುಜಾತಿ (extortion). ಮೇನಿಯಾ ಗೀಳುಜಾತಿ.

ಪಿ. ಜಯವಂತ ಪೈ, ಕುಂದಾಪುರ

ಮನೆಯ ಗೇಟಿನಲ್ಲಿ ಒಂದೆಡೆ ಸ್ವಾಗತ, ಇನ್ನೊಂದೆಡೆ ನಾಯಿ ಇದೆ ಎಚ್ಚರಿಕೆ ಬೋರ್ಡ್ ಹಾಕುವುದೇಕೆ?




ಆ ಮನೆಯಲ್ಲಿ ಬಾಲ ಆಡಿಸುವವರು, ಕಚ್ಚಾಡುವವರು ಇಬ್ಬರೂ ಇದ್ದಾರೆನ್ನಲು.

ಬಿ.ಎಂ. ಸುಬ್ಬಣ್ಣ, ಬೆಂಗಳೂರು

ಹಿಂದೆ ಗಂಡು–ಹೆಣ್ಣಿಗೆ ಮದುವೆ. ಈಗ ಕಾಲ ಬದಲಾಗಿದೆ. ಮುಂದೆ?

ಹಿಂದಿನ ಕಥೆಯೇ. ಬದುಕಿನ ದಿಕ್ಕು ಸರಳರೇಖೆಯಲ್ಲ, ಚಕ್ರದ ಭ್ರಮಣ.

ವಿಜಯ್ ಹೆಮ್ಮಿಗೆ, ಮೈಸೂರು

ಬಣ್ಣಬಣ್ಣದ ಆಶ್ವಾಸನೆಗಳು, ಭರವಸೆಗಳನ್ನು ನೀಡುವ ರಾಜಕಾರಣಿ ಬಣ್ಣದ ಬಟ್ಟೆಯನ್ನೇಕೆ ತೊಡುವುದಿಲ್ಲ?

ಬಹುತೇಕ ರಾಜಕಾರಣಿಗಳ ದೇಹವು ಮನುಷ್ಯತ್ವದ ಶವದ ಕೋಶ. ಶವಕೋಶಕ್ಕೆ ಬಿಳಿಯೇ ಸೂಕ್ತ.

ಶಿವಮೊಗ್ಗ ರಮೇಶ್, ಮೈಸೂರು

ರಾಜಕಾರಣಿಗಳ ಸಡಿಲ ನಾಲಿಗೆಯ ಅಧೋಗತಿಗೆ ಸಂಸ್ಕಾರವಿಲ್ಲದಿರುವುದೇ ಕಾರಣವೇ?

ಕಾನೂನಿನ ಸಡಿಲತೆಯೇ ಕಾರಣ. ಬಿಗಿ ಕಾನೂನು ಸಂಸ್ಕಾರದ ತಳಹದಿ.

ವಿ. ಹೇಮಂತಕುಮಾರ್, ಬೆಂಗಳೂರು

ಮದುವೆಯಲ್ಲಿ ಹೆಣ್ಣಿಗಿಂತ ಹೆಣ್ಣಿನ ತಾಯಿಯೇ ಹೆಚ್ಚು ಅಲಂಕಾರ ಮಾಡಿಕೊಂಡಿರುತ್ತಾರಲ್ಲವೆ?

ಸರಿಯೇ. ಹಳೆಯ ಗೋಡೆ ಹೆಚ್ಚು ಪೇಂಟ್ ಕುಡಿಯುತ್ತದೆ.

ಬಿ.ಆರ್. ಉಷಾ, ಕೆನಡಾ

ಹೆಣ್ಣೇ ಯಾಕೆ ಮದುವೆಯಾದ ಮೇಲೆ ಗಂಡಿನ ಮನೆಗೆ ಹೋಗಬೇಕು?

ಯಾವುದನ್ನು ಪಳಗಿಸಬೇಕೋ ಅದು ಇರುವಲ್ಲಿಗೇ ಪಳಗಿಸುವವರು ಹೋಗಬೇಕು.

ರತ್ನಜ, ಮೈಸೂರು

ಲೌಕಿಕ ಪ್ರಪಂಚದ ಅತ್ಯುನ್ನತ ಸುಖ ಯಾವುದು ಮಹರಾಯ್ರೆ?

ವೃದ್ಧಾಪ್ಯದಲ್ಲೂ ನಿಶ್ಚಿಂತೆಯಿಂದ ಹಲ್ವಾ, ಪಕೋಡ ತಿನ್ನುತ್ತ ಓಡಾಡುವುದು.

ಅನಸೂಯ ಟಿ. ಕೇದಿಗೆಮನೆ

ಆಳು ಮಾಡುವ ಕೆಲಸ ಹಾಳು ಎನ್ನುತ್ತಾರಲ್ಲ, ಏಕೆ?

ಹೈಕ್ಲಾಸ್ ಎಂದುಬಿಟ್ಟರೆ ಇಂಕ್ರಿಮೆಂಟ್, ಬೋನಸ್, ಲೀವ್ ಕೇಳಿಬಿಡುತ್ತಾನೆಂದು.

ರಾಜೀವ್ ಮಾಗಲ್, ಸಕಲೇಶಪುರ

ಮನುಷ್ಯನಿಗೆ ನಾಯಿಯ ನಿಯತ್ತು ಇದ್ದಿದ್ದರೆ?

ಬೆಳ್ಳಿ, ಚೈನು, ಅಲ್ಯುಮಿನಿಯಮ್ ತಟ್ಟೆ, ನಾಯಿಗೂಡು ಅಷ್ಟೇ ಗಟ್ಟಿ ಆಗಿರುತ್ತಿತ್ತು!

ಜಗದೀಶ ಬಿ. ಹೊಸೂರು, ಮೈಸೂರು

ಸಾಮಾನ್ಯನಿಗೂ, ಶ್ರೀಸಾಮಾನ್ಯನಿಗೂ ಇರುವ ವ್ಯತ್ಯಾಸವೇನು?

ಅದು ಅಂಗವಿಕಲರನ್ನು ದಿವ್ಯಾಂಗರು ಎಂದಂತೆ. ಕರಕರೆ ಅದೇ, ಕರೆಯಷ್ಟೇ ಬೇರೆ.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ

ಕೃತಕ ಹಲ್ಲು ಎಷ್ಟೋ ಬಾರಿ ನಿಜಹಲ್ಲನ್ನು ಮೀರಿಸುವಂತಿದ್ದರೂ ನಿಜಹಲ್ಲಿಗೇಕೆ ಅಷ್ಟೊಂದು ಪ್ರಾಮುಖ್ಯತೆ?

ನಿಜಹಲ್ಲು ಮಗಳು; ಕೃತಕ ಹಲ್ಲು ಸೊಸೆ. ಸೊಸೆ ಎಷ್ಟೇ ಒಳ್ಳೆಯವಳಾದರೂ ಮಗಳಾಗಳು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಬಸ್ಸಿನಲ್ಲಿ ಫೋನ್ ಪೇ ವ್ಯವಸ್ಥೆ ಯಾಕಿಲ್ಲ?

ರಶ್ ಅವರ್‌ನಲ್ಲಿ ಅಕ್ಕಪಕ್ಕದವರು ಪಾಸ್‌ವರ್ಡನ್ನು ಕದ್ದು ನೋಡಿಬಿಡುತ್ತಾರೆಂದು.

ಪಿ.ಜೆ. ರಾಘವೇಂದ್ರ, ಮೈಸೂರು

ಸಬ್‌ಇನ್ಸ್‌ಪೆಕ್ಟರ್ ಹಾಗೂ ಸಬ್‌ರಿಜಿಸ್ಟ್ರಾರ್ ನಡುವಿನ ವ್ಯತ್ಯಾಸವೇನು?

ಕಳ್ಳರನ್ನು ಬೆನ್ನಟ್ಟಲು ಸಬ್‌ಇನ್ಸ್‌ಪೆಕ್ಟರ್ ನಡು ಸಣ್ಣಗಿರಬೇಕು. ಸಬ್‌ರಿಜಿಸ್ಟ್ರಾರ್ ನಡು ಡ್ರಮ್ಮಿನಂತಿದ್ದರೂ ಆದೀತು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಪಬ್, ಬಾರ್‌ಗಳು ಸಮಾಜಕಂಟಕ ಎಂದು ಗೊತ್ತಿದ್ದರೂ ಸರ್ಕಾರ ಏಕೆ ಅನುಮತಿ ನೀಡುತ್ತದೆ?



ಕೇಡಿಗರು ಹೊರಗಿದ್ದು ಕಲ್ಲು ಬೀರುವುದಕ್ಕಿಂತ ಒಳಗಿದ್ದು ಬಿಯರ್ ಹೀರುವುದು ಉತ್ತಮವೆಂದು.

ಭಾರತೀ ಗಂಗಾಧರ್, ಬೆಂಗಳೂರು

ದ್ರೌಪದಿ ತೊಳೆದ ಪಾತ್ರೆಯಲ್ಲಿದ್ದ ಅಗುಳು ತಿಂದ ಕೃಷ್ಣ ಅದನ್ನು ಅಕ್ಷಯಪಾತ್ರೆಯಾಗಿಸಿದ. ಈಗ ಅಂಥ ಅವಕಾಶವಿದ್ದಿದ್ದರೆ?

ಅಗುಳೇನು, ಗೆಡ್ಡೆಗಳೇ ಅಂಟಿದ ಪಾತ್ರೆಗಳಿವೆ. ಕೃಷ್ಣ ಈಗ ತಂಗಳು ತಿನ್ನುವುದನ್ನು ನಿಲ್ಲಿಸಿದ್ದಾನಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ತಾಯಿಯ ಆಶೀರ್ವಾದ ಮಳೆ ಬಂದಾಗ ಛತ್ರಿ ಇದ್ದಂತೆ. ತಂದೆಯದು?

ಆ ಛತ್ರಿಯು ತೆರೆದುಕೊಳ್ಳಲು ಒತ್ತಬೇಕಾದ ಬಟನ್ ಇದ್ದಂತೆ.

■ ರಾಮ್